# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಕಟ್ಟಡಗಳ ಪೂರಕ ಬ್ಲಾಕ್, ನೃಪತುಂಗ ರಸ್ತೆ, ಕೆಆರ್‌ಸರ್ಕಲ್, ಬೆಂಗಳೂರು–1

## ಮಾದರಿ ಶಾಲೆಗಳು (ಆದರ್ಶ ವಿದ್ಯಾಲಯ) ಶಾಲಾ ಪರಿಚಯ (ಪ್ರಾಸ್ಪೆಕ್ಟಸ್)

ಪ್ರೌಢ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಉತ್ತಮ ಗುಣ ಮಟ್ಟದ ಅವಕಾಶ, ಸೌಕರ್ಯ ಮತ್ತು ಲಭ್ಯತೆಯನ್ನು ಎಲ್ಲಾ ಯುವ ಜನಾಂಗಕ್ಕೆ ಪೂರೈಸಲು ಸರ್ಕಾರಗಳು ಬದ್ಧವಾಗಿವೆ. ಇದಕ್ಕಾಗಿ ಸರ್ಕಾರವು ದೇಶದಾದ್ಯಂತ ಉತ್ತಮ ಗುಣಮಟ್ಟದ ಶಾಲೆಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ 74 ತಾಲ್ಲೂಕುಗಳಲ್ಲಿ ಮಾದರಿ ಶಾಲೆಗಳನ್ನು ಆರಂಬಿಸಲಾಗಿದೆ. ಅವುಗಳಿಗೆ ಆದರ್ಶ ವಿದ್ಯಾಲಯ ಎಂದು ಹೆಸರಿಸಲಾಗಿದೆ. ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಂಗ್ಲ ಮಾಧ್ಯಮ ಶಿಕ್ಷಣ ಒದಗಿಸುವುದು ಈ ಪ್ರಯತ್ನದ ಉದ್ದೇಶ.

**ನಮ್ಮ ಕನಸು**

“ವಿದ್ಯಾರ್ಥಿಗಳಿಗೆ ಸಂಪೂರ್ಣವಾದ ಗುಣಮಟ್ಟದ ಶಿಕ್ಷಣವನ್ನು ನೀಡಿ ಉತ್ಕೃಷ್ಟವಾದ ವೈಯಕ್ತಿಕ ಮತ್ತು ಶೈಕ್ಷಣಿಕ ಗುರಿಯನ್ನು ಸಾಧಿಸಲು /ಸಲುಪಲು ಸಮರ್ಥರನ್ನಾಗಿ ಮಾಡುವುದು ಹಾಗೂ ಈ ಶಾಲೆಯನ್ನು ಅತ್ಯವಶ್ಯ ಮೌಲ್ಯಗಳುಳ್ಳ ಮತ್ತು ಸಾಧಿಸಬಹುದಾದ ಗುರಿಗಳ ಆಧಾರದಲ್ಲಿ ಉತ್ತಮ ಕಲಿಕೆಯ ಕೇಂದ್ರವನ್ನಾಗಿ ಮಾಡುವುದು”

**ನಮ್ಮ ಧ್ಯೇಯ**

“ಜಾತಿ, ವರ್ಗ, ಧರ್ಮ ಇವುಗಳ ಯಾವುದೇ ತಾರತಮ್ಯವಿಲ್ಲದೇ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿ, ಅವರನ್ನು ಜವಾಬ್ದಾರಿಯುಳ್ಳ, ಸ್ವಸಾಮರ್ಥ್ಯ ಮತ್ತು ಏಕತೆಯ ಮನೋಭಾವವನ್ನು ಹೊಂದಿದ ಆದರ್ಶ ನಾಗರೀಕರನ್ನಾಗಿ ಮಾಡುವುದು”.

### 2011–12ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳ ವಿಶೇಷತೆಗಳು

- ಆದರ್ಶ ವಿದ್ಯಾಲಯಗಳ ಮೂಲಭೂತ ಸಂರಚನೆಗಳು ಮತ್ತು ಸೌಕರ್ಯಗಳು ಕೇಂದ್ರೀಯ ವಿದ್ಯಾಲಯಗಳ ಮಾದರಿಯಲ್ಲಿರುತ್ತವೆ. ಸೂಕ್ತವಾದ ಪಠ್ಯಕ್ರಮ, ವಿದ್ಯಾರ್ಥಿ ಶಿಕ್ಷಕರ ಅನುಪಾತ, ಮಾಹಿತಿ ಸಂವಹನ, ತಂತ್ರಜ್ಞಾನದ ಬಳಕೆ, ಸಂಪೂರ್ಣ ಶೈಕ್ಷಣಿಕ ಪರಿಸರ ಮತ್ತು ವಿದ್ಯಾರ್ಥಿಗಳ ಕಲಿಕೆ (ಔಟ್‌ಪುಟ್)ಗಳನ್ನು ಈ ಶಾಲೆಗಳು ಹೊಂದಿರುತ್ತವೆ.
- ಈ ಶಾಲೆಗಳು 2010–11ನೇ ಸಾಲಿನಿಂದ 6ನೇ ತರಗತಿ ಮತ್ತು ತಲಾ ಎರಡು ವಿಭಾಗಗಳೊಂದಿಗೆ ಆರಂಭವಾಗಿವೆ. ಬೋಧನಾ ಮಾಧ್ಯಮವು ಇಂಗ್ಲೀಷ್ ಆಗಿದ್ದು, ರಾಜ್ಯದ ಪಠ್ಯ ಕ್ರಮ ಅಳವಡಿಸಿದೆ.
- 2011–12ನೇ ಸಾಲಿನಲ್ಲಿ 6 ಮತ್ತು 7ನೇ ತರಗತಿಗಳು ನಡೆಯಲಿವೆ. 6ನೇ ತರಗತಿಗೆ ಗರಿಷ್ಠ 80 ಮಕ್ಕಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ.
- ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡಲು ಸಾಮರ್ಥ್ಯವಿರುವ ಮತ್ತು ಪದವಿ ಹಾಗೂ ಸ್ನಾತಕ್ಕೋತ್ತರ ಪದವಿಯೊಂದಿಗೆ ತರಬೇತಿ ಪಡೆದ ಶಿಕ್ಷಕರನ್ನು ಒದಗಿಸಲಾಗುತ್ತದೆ.
- ಉತ್ತಮ ಭೌತಿಕ ಸೌಕರ್ಯಗಳಾದ ತರಗತಿ ಕೊಠಡಿಗಳು, ಪ್ರಯೋಗಾಲಯ, ಕಂಪ್ಯೂಟರ್ ಕೊಠಡಿ, ಗ್ರಂಥಾಲಯ, ಶೌಚಾಲಯ, ಆಟದ ಮೈದಾನಗಳನ್ನು ಹೊಂದಿರುವ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದ ಅನುಮೋದನೆ ದೊರೆತಿದ್ದು, ಶೀಘ್ರವೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.
- ಕನಿಷ್ಠ 5 ಕೊಠಡಿಗಳು, ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ ಮುಂತಾದ ಮೂಲ ಸೌಕರ್ಯ ಇರುವ ಶಾಲೆಯನ್ನು ಆಯ್ದುಕೊಂಡು ಆದರ್ಶ ವಿದ್ಯಾಲಯಗಳನ್ನು ಆರಂಭಿಸಲಾಗಿದೆ. ಕಾಮಗಾರಿ ಪೂರ್ಣಗೊಳ್ಳುವವರೆಗೆ ಈ ಶಾಲೆಗಳಲ್ಲಿಯೇ ಅವಶ್ಯಕ ವ್ಯವಸ್ಥೆ ಪೂರೈಸಲು ಕ್ರಮಕೈಗೊಳ್ಳಲಾಗುವುದು.
- ಸರ್ಕಾರಿ ಶಾಲೆಗಳಿಗೆ ಲಭ್ಯವಿರುವ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಉಪಾಹಾರ ಇವುಗಳ ಜೊತೆಗೆ ಶಾಲಾ ಡೈರಿ ಮೊದಲಾದ ಸವಲತ್ತುಗಳು ಈ ಶಾಲೆಗಳಲ್ಲೂ ದೊರೆಯುತ್ತವೆ.

- ರಾಜ್ಯದಲ್ಲಿರುವ 202 ಶೈಕ್ಷಣಿಕ ಬ್ಲಾಕ್‌ಗಳ ಪೈಕಿ, 74 ಶೈಕ್ಷಣಿಕವಾಗಿ ಹಿಂದುಳಿದಿದ್ದು ಅಲ್ಲಿ ಮಾತ್ರ ಆದರ್ಶ ವಿದ್ಯಾಲಯಗಳನ್ನು ಆರಂಭಿಸಲಾಗಿದೆ.

- ಆದರ್ಶ ವಿದ್ಯಾಲಯಗಳಿಗೆ ಸಾಮಾನ್ಯ ಪರೀಕ್ಷೆ ಮೂಲಕ ರಾಜ್ಯದ ರೋಸ್ಟರ್ ನಿಯಮಗಳಿಗೆ ಅನುಗುಣವಾಗಿ ದಾಖಲಾತಿ ಮಾಡಿಕೊಳ್ಳಲಾಗುವುದು. ಆಯ್ಕೆ ಪರೀಕ್ಷೆ ಆಯಾ ಬ್ಲಾಕ್‌ನ ಕೇಂದ್ರದಲ್ಲಿ ನಡೆಯುವುದು. ಆಯಾ ಬ್ಲಾಕ್‌ನ ಮಕ್ಕಳಿಗೆ ಮಾತ್ರ ಪ್ರವೇಶ ಪರೀಕ್ಷೆಗೆ ಅವಕಾಶ.

- ಪರೀಕ್ಷಾ ವೇಳಾಪಟ್ಟಿ :

| | | |
|---|---|---|
| 1 | ಪ್ರಚಾರ ಕಾರ್ಯ (ಬ್ಲಾಕ್ ಹಂತದಲ್ಲಿ) – ನಿರಂತರ ಪ್ರಚಾರ | 07.03.2011 ಇಂದ ಪರೀಕ್ಷೆ ಹಿಂದಿನ ದಿನದವರೆಗೆ |
| 2 | ಪ್ರಚಾರ ಕಾರ್ಯ (ಬ್ಲಾಕ್ ಹಂತದಲ್ಲಿ) – ವಿಶೇಷ ಪ್ರಚಾರ | 21.03.2011 ಇಂದ 22.03.2011. |
| 3 | ಅರ್ಜಿವಿತರಣೆ<br>(ಆಯಾ ಆದರ್ಶ ವಿದ್ಯಾಲಯಗಳು / ಬಿಇಓ ಕಛೇರಿಗಳು) | 07.03.2011 ಇಂದ 24.03.2011. |
| 4 | ಭರ್ತಿಮಾಡಿದ ಅರ್ಜಿಗಳನ್ನು ಬಿಇಓ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ | 26.03.2011. ರಂದು ಸಂಜೆ 5ರವರೆಗೆ |
| 5 | ಸಾಮಾನ್ಯ ಪ್ರವೇಶ ಪರೀಕ್ಷೆ<br>(ಆಯಾ ಬ್ಲಾಕ್ ಕೇಂದ್ರಗಳಲ್ಲಿ) | 03.04.2011 ರಂದು ಬೆಳಿಗ್ಗೆ 10.30 ರಿಂದ 12.30 |
| 6 | ಉತ್ತರ ಪತ್ರಿಕೆಗಳ ಮೌಲ್ಯಮಾಪನ (ಡಯಟ್ ಹಂತ) | 06.04.2011 ಇಂದ 07.04.2011 |
| 7 | ಫಲಿತಾಂಶ ಪ್ರಕಟಣೆ ಮತ್ತು ಅರ್ಹತೆಯಾಧಾರಿತ ಆಯ್ಕೆ ಪಟ್ಟಿ ಪ್ರಕಟಣೆ (ರಾಜ್ಯ ಹಂತ) | 20.04.2011. ರಂದು |
| 8 | ದಾಖಲಾತಿ ಪ್ರಕ್ರಿಯೆ (ಶಾಲಾ ಹಂತ) | 20.05.2011 ಇಂದ 10.06.2011 |
| 9 | ಶಾಲೆ ಪ್ರಾರಂಭ | 28.05.2011 ರಂದು |

- ಅರ್ಜಿಗಳನ್ನು ಆಯಾ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಂದ ಅಥವಾ ಆಯಾ ತಾಲ್ಲೂಕಿನ ಬಿಇಓ ಕಛೇರಿಗಳಲ್ಲಿ ಪಡೆಯಬಹುದು. ಈ ಮುಂದೆ ನಮೂದಿಸಿರುವ ವೆಬ್‌ಸೈಟ್‌ಗಳಿಂದಲೂ ಡೌನ್‌ಲೋಡ್ ಮಾಡಿ ಮುದ್ರಿಸಿಕೊಳ್ಳಬಹುದು. www.ssakarnataka.gov.in

- ಆಯ್ಕೆ ಪರೀಕ್ಷೆಯಲ್ಲಿ 5ನೇ ತರಗತಿ ಪಠ್ಯ ಪುಸ್ತಕ ಆಧರಿಸಿ ಭಾಷೆಗಳು (20%), ಗಣಿತ (20%), ವಿಜ್ಞಾನ (20%), ಸಮಾಜ ವಿಜ್ಞಾನ (20%) ಮತ್ತು ಸಾಮಾನ್ಯ ಜ್ಞಾನ (20%)ಗಳನ್ನು ಪರಿಗಣಿಸಲಾಗುವುದು.

- ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ (ಆಬ್ಜೆಕ್ಟೀವ್) ಪ್ರಶ್ನೆಗಳನ್ನು ಹೊಂದಿದ್ದು ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿರುತ್ತವೆ.

- ಆಯ್ಕೆಪರೀಕ್ಷೆಗಾಗಿ ಒಂದೇ ಪ್ರಶ್ನೆ ಪತ್ರಿಕೆ ಇದ್ದು, ಪರೀಕ್ಷೆ ಅವಧಿ 2 ಘಂಟೆ ಆಗಿರುತ್ತದೆ. ಪರೀಕ್ಷಾ ದಿನದಂದು ಬೆಳಗಿನ 10:30 ರಿಂದ 12:30ರವರೆಗೆ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರ, ಆಯಾ ತಾಲ್ಲೂಕು ಕೇಂದ್ರದಲ್ಲಿ ಇದ್ದು, ಕನಿಷ್ಠ 250 ಮಕ್ಕಳಿಗೆ ಒಂದು ಕೇಂದ್ರ ಇರುತ್ತದೆ.

- ಆಯ್ಕೆ ಪರೀಕ್ಷೆಗಳಿಗೆ ಪೂರಕವಾದ ವಿವಿಧ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಮಾದರಿಗಳನ್ನು ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಲು ಅವಕಾಶವಿದೆ.

***